ಎಂದರೆ ಅವಳ ಒಳ್ಳೇತನಕ್ಕೆ ಸುಮಾರು ಪದಕಗಳು ಬಂದವು. ಬೆರ್ತಾ ಆ ಪದಕಗಳನ್ನ ಪಿನ್ನು ಚುಚ್ಚಿ ಯಾವಾಗಲೂ ತನ್ನ ಡ್ರೆಸ್‌ಗೆ ಸಿಕ್ಕಿಸಿಕೊಳ್ತಾ ಇದ್ದಳು. ಅವುಗಳಲ್ಲಿ ಒಂದು ಅವಳ ವಿಧೇಯತೆಗೆ ಸಿಕ್ಕಿದ ಪದಕ, ಮತ್ತೊಂದು ಅವಳ ಸಮಯಪಾಲನೆಗೆ, ಮೂರನೇದು ಒಳ್ಳೆಯ ನಡತೆಗೆ. ಅವಳು ನಡೆಯುವಾಗ ಹಿತ್ತಾಳೆಯ ಆ ಪದಕಗಳು ಒಂದಕ್ಕೊಂದು ಬಡಿದು ಕಿಣಿಕಿಣಿ ಸದ್ದು ಮಾಡ್ತಿದ್ದವು. ಆ ಪಟ್ಟಣದಲ್ಲಿ ಬೇರೆ ಯಾವ ಮಕ್ಕಳಿಗೂ ಅಷ್ಟೊಂದು ಪದಕ ಸಿಕ್ಕಿರಲಿಲ್ಲ. ಹೀಗಾಗಿ ಪಟ್ಟಣದಲ್ಲಿ ಆಕೆ ಬಹಳ ಒಳ್ಳೇ ಹುಡುಗಿ ಎಂದು ಮಾತಾಡಿಕೊಳ್ತಿದ್ದರು.'

'ತುಂಬಾ ತುಂಬಾ ಒಳ್ಳೆ ಹುಡುಗಿ.' ಸಿರಿಲ್ ಯುವಕನ ಮಾತನ್ನ ಮತ್ತೆ ಉಚ್ಚರಿಸಿದ.

'ಹೀಗೆ ಎಲ್ಲಾ ಜನ ಆಕೆಯ ಒಳ್ಳೆತನದ ಬಗ್ಗೆ ಮಾತಾಡ್ತಿದ್ದರಲ್ಲ, ಅದು ಒಮ್ಮೆ ಆ ದೇಶದ ರಾಜಕುಮಾರನ ಕಿವಿಗೂ ಬಿತ್ತು. ಬೆರ್ತಾ ತುಂಬಾ ಒಳ್ಳೆಯ ಹುಡುಗಿಯಂತೆ, ಅವಳು ವಾರಕ್ಕೊಮ್ಮೆ ಅರಮನೆಯ ಉದ್ಯಾನದಲ್ಲಿ ಅಡ್ಡಾಡಲು ಅನುಮತಿ ಕೊಡಲಾಗಿದೆ ಎಂದ ರಾಜಕುಮಾರ. ಅರಮನೆಯ ಉದ್ಯಾನ ಅಲ್ಲೇ ಪಟ್ಟಣದ ಹೊರವಲಯದಲ್ಲಿತ್ತು. ಸುಂದರವಾದ ಆ ಉದ್ಯಾನಕ್ಕೆ ಆ ವರೆಗೆ ಯಾವ ಮಕ್ಕಳಿಗೂ ಪ್ರವೇಶ ಸಿಕ್ಕಿರಲಿಲ್ಲ. ಆದ್ದರಿಂದ ಬೆರ್ತಾಳ ಹೆಸರು ಪಟ್ಟಣದಲ್ಲಿ ಬಹುಬೇಗ ಹಬ್ಬಿತು.'

ಸಿರಿಲ್ ಬಹಳ ಕುತೂಹಲದಿಂದ ಕೇಳಿದ – 'ಉದ್ಯಾನದಲ್ಲಿ ಕುರಿಗಳು ಇದ್ದಿರಬೇಕಲ್ಲ?'

'ಇಲ್ಲ' ಎಂದ ಯುವಕ. 'ಅಲ್ಲಿ ಕುರಿಗಳು ಇರಲಿಲ್ಲ.'

'ಯಾಕೆ ಇರ್ಲಿಲ್ಲ?' ಸಿರಿಲ್ ಮತ್ತೊಂದು ಪ್ರಶ್ನೆಯಿಟ್ಟ.

ಮಹಿಳೆ ಇದನ್ನೆಲ್ಲ ಆಲಿಸುತ್ತ ಕೂತಿದ್ದಳು. ಅವಳಿಗೆ ನಗು ಬಂತು. ಆದರೆ ನಗದೆ ಹಲ್ಲು ಕಿರಿದಳು.

'ಉದ್ಯಾನದಲ್ಲಿ ಒಂದೂ ಕುರಿ ಇರಲಿಲ್ಲ,' ಎಂದ ಯುವಕ. 'ಆ ಕತೆಯನ್ನೂ ನಿಮಗೆ ಹೇಳ್ಬೇಕು. ರಾಜಕುಮಾರನ ತಾಯಿಗೆ ಒಮ್ಮೆ ಒಂದು ಕನಸು ಬಿತ್ತು ಎನ್ನುತ್ತಾರೆ. ರಾಜಕುಮಾರ ಕುರಿಗಳಿಂದ ಸಾಯುತ್ತಾನೆ ಅಥವಾ ಗಡಿಯಾರ ತಲೆಯ ಮೇಲೆ ಬಿದ್ದು ಅವನ ಜೀವ ಹೋಗುತ್ತದೆ ಎಂದು ಕನಸಿನಿಂದ ತಿಳಿಯಿತು ಎನ್ನುತ್ತಾರೆ. ಆದ್ದರಿಂದ ರಾಜಕುಮಾರ ಉದ್ಯಾನದಲ್ಲಿ ಕುರಿಗಳನ್ನು ಇಟ್ಟುಕೊಳ್ಳೋದಿಲ್ಲ, ಹಾಗೆಯೇ ಅರಮನೆಗಳಲ್ಲಿ ಗಡಿಯಾರವನ್ನೂ ಇಟ್ಟುಕೊಳ್ಳೋದಿಲ್ಲ.'

ಕತೆಯ ಎಳೆ ಮಹಿಳೆಗೂ ಮೆಚ್ಚುಗೆಯಾಯಿತು. ಸಿರಿಲ್ ಮಿತಿಮೀರಿದ ಉತ್ಸಾಹದಲ್ಲಿದ್ದ. 'ಹಾಗಾದರೆ ರಾಜಕುಮಾರ ಕುರಿಗಳಿಂದ ಸತ್ತನೋ ಗಡಿಯಾರದಿಂದಲೋ?'

ಆ ಪ್ರಶ್ನೆಗೆ ಯುವಕ ತಲೆ ಕೆಡಿಸಿಕೊಳ್ಳದೆ ಹೇಳಿದ, 'ರಾಜಕುಮಾರ ಇನ್ನೂ ಬದುಕಿರೋದರಿಂದ ಆ ಕನಸು ಎಷ್ಟು ನಿಜ ಎಂದು ಹೇಳೋದು ಹೇಗೆ! ಅದನ್ನ ಬಿಟ್ಬಿಡಿ ಈಗ. ಉದ್ಯಾನದಲ್ಲಿ ಕುರಿಗಳಿರ್ಲಿಲ್ಲ. ಆಯ್ತು? ಆದರೆ ಉದ್ಯಾನದಲ್ಲಿ ಲೆಕ್ಕವಿಲ್ಲದಷ್ಟು ಸಣ್ಣ ಸಣ್ಣ ಹಂದಿಗಳಿದ್ದವು, ಅವು ಉದ್ಯಾನದ ತುಂಬಾ ಓಡಾಡಿಕೊಂಡಿದ್ದು.'

'ಹಂದೀನ! ಅವು ಯಾವ ಬಣ್ಣದಲ್ಲಿದ್ವು?'

'ಬಿಳೀ ಮುಖದ ಕಪ್ಪು ಹಂದಿಗಳು, ಮೈತುಂಬ ಕಪ್ಪು ಚುಕ್ಕೆಯಿರುವ ಬಿಳಿ ಹಂದಿಗಳು, ಪೂರ್ತಾ ಕಪ್ಪು, ಮತ್ತೆ ಕೆಲವು ಪೂರಾ ಬಿಳಿ, ಇನ್ನು ಒಂದಷ್ಟು ಬೂದು ಬಣ್ಣವಿದ್ದರೂ ಮೈಮೇಲೆ ಬಿಳಿ ಚುಕ್ಕೆಗಳಿದ್ದು ಅವಕ್ಕೆ.' ಈಗ ಉದ್ಯಾನದ ಒಟ್ಟೂ ಕಲ್ಪನೆ ಮಕ್ಕಳಿಗೆ ಸಿಗಲಿ ಎಂದು ಕತೆ ನಿಲ್ಲಿಸಿದ ಯುವಕ ಮತ್ತೆ ಮುಂದುವರಿಸಿದ. 'ಉದ್ಯಾನದಲ್ಲಿ ಹೂವೇ ಇಲ್ಲ ಎಂದು ಬೆರ್ತಾ ಬೇಸರ ಮಾಡಿಕೊಂಡಿದ್ದಳು. ರಾಜಕುಮಾರ ಒಳ್ಳೆಯವನು, ಆದ್ದರಿಂದ ಉದ್ಯಾನದಲ್ಲಿರುವ ಒಂದು ಹೂವನ್ನೂ ತಾನು ಕೊಯ್ಯೋದಿಲ್ಲ ಎಂದು ಚಿಕ್ಕಮ್ಮಂಗೆ ಮಾತುಕೊಟ್ಟಿದ್ದಳು. ಹಾಗನ್ನುವಾಗ ಅವಳ ಕಣ್ಣು ಒದ್ದೆಯಾಗಿತ್ತು. ತಾನು ಕೊಟ್ಟ ಆಶ್ವಾಸನೆ ಅವಳಿಗೆ ಚೆನ್ನಾಗಿಯೇ ಜ್ಞಾಪಕವಿತ್ತು. ಆದ್ದರಿಂದ